ದಾರಿ ಬಿಟ್ಟು ಬೇರೆ ಕಡೆಗೆ ಹೋದರು. ಹನ್ನೆರಡು ಗಂಟೆ ಹೊತ್ತಿಗೆ ಮಾರ್ಕೆಟ್ ಸರ್ಕಲ್ ತಲುಪಿದರು. ಅಲ್ಲಿಂದ ಮುಂದಕ್ಕೆ ಎಲ್ಲಿಗೆ ಹೋಗಬೇಕು ಅನ್ನೋದು ಗೊತ್ತಾಗದೆ ಸಲೂನ್ ಒಂದರ ಮುಂದೆ ಹಾಕಿದ್ದ ಬೆಂಚಿನ ಮೇಲೆ ಕೂತರು. ಸಲೂನ್ ಮುಂದೆ ಒಬ್ಬ ಬೇರು,ನಾರುಗಳನ್ನು ಗುಡ್ಡೆ ಹಾಕಿಕೊಂಡು ಬ್ಯಾಟರಿ ಮೈಕಿನಲ್ಲಿ ತನ್ನಲ್ಲಿರುವ ಮೂಲಿಕೆಗಳ ಬಗ್ಗೆ ಗುಣಗಾನ ಮಾಡುತ್ತಿದ್ದುದನ್ನು ನೋಡಿದರು.

'ಇವು ನಾರು ಬೇರುಗಳಲ್ಲ, ಅಪೂರ್ವ ಮೂಲಿಕೆಗಳು. ಹಿಮಾಲಯ ಪರ್ವತದಲ್ಲಿ ಓಡಾಡಿ ತಂದಿದ್ದೀನಿ.ಇವಕ್ಕೆ ಸರ್ವರೋಗಗಳನ್ನೂ ವಾಸಿ ಮಾಡುವ ಶಕ್ತಿ ಇದೆ...' ಎಂದು ಹಿಂದಿ, ಕನ್ನಡ, ತೆಲುಗಿನಲ್ಲಿ ವಿವರಣೆ ಕೊಡುತ್ತಿದ್ದ. ರಸ್ತೆಯಲ್ಲಿ ಓಡಾಡುತ್ತಿದ್ದ ಜನ ಒಂದು ಕ್ಷಣ ನಿಂತು ಅವನ ಕಡೆಗೊಮ್ಮೆ ನೋಡಿ ಮುಂದಕ್ಕೆ ಹೋಗುತ್ತಿದ್ದರೇ ವಿನಾ ಯಾರೂ ಮೂಲಿಕೆಗಳ ಖರೀದಿಗೆ ಮನಸ್ಸು ಮಾಡಲಿಲ್ಲ. ಪ್ರಭುದೇವ ಸ್ವಲ್ಪ ಹೊತ್ತು ಅವನನ್ನೇ ನೋಡುತ್ತ ಕುಳಿತಿದ್ದರು. ಆಮೇಲೆ ಏನನ್ನಿಸಿತೋ ಮೂಲಿಕೆಯವನ ಕೈಯಿಂದ ಮೈಕ್ ಕಸಿದುಕೊಂಡು ಮಾತು ಶುರು ಮಾಡಿದರು!

'ಈಗ ದೇಶದಲ್ಲಿ ನಿರಂಕುಶ ಆಡಳಿತ ನಡೀತಿದೆ. ಜನರು ಕೊಟ್ಟ ತೆರಿಗೆ ದುಡ್ಡು ದೊಡ್ಡ ಉದ್ಯಮಿಗಳ ಖಜಾನೆ ಸೇರ್ತಿದೆ. ದಿನ ಬಳಕೆ ವಸ್ತುಗಳ ಬೆಲೆಗಳು ಸಿಕ್ಕಾಪಟ್ಟೆ ಏರ್ತಿವೆ. ಬಡವರಿಗೆ ನೆಮ್ಮದಿ ಇಲ್ಲ. ಇದನ್ನೆಲ್ಲ ನೋಡ್ಕಂಡು ನಾವು ಸುಮ್ಮನೆ ಇದ್ದೀವಿ. ಎಷ್ಟು ದಿನ ಹೀಗೆ ಇರೋದು? ಈ ಅನ್ಯಾಯವನ್ನು ನಾವೆಲ್ಲರೂ ಪ್ರತಿಭಟಿಸಬೇಕಲ್ವ...' ಎಂದು ರಸ್ತೆಯಲ್ಲಿ ಓಡಾಡುತ್ತಿದ್ದ ಜನರ ಕಡೆ ನೋಡುತ್ತ ಕೇಳಿದರು. ಐದಾರು ನಿಮಿಷ ಕಳೆಯುವಷ್ಟರಲ್ಲಿ ಅವರ ಸುತ್ತ ಜನ ಸೇರಿದರು. ಪ್ರಭುದೇವ ಆಡುತ್ತಿದ್ದ ಮಾತುಗಳನ್ನು ಜನ ಕೇಳಿಸಿಕೊಂಡರು. ಪ್ರಭುದೇವ ಮಾತಾಡುತ್ತಲೇ ಇದ್ದರು. ಹತ್ತು ನಿಮಿಷ ಕಳೆಯಿತು. ರಸ್ತೆಯಲ್ಲಿ ವಾಹನಗಳ ಓಡಾಟಕ್ಕೆ ತೊಂದರೆ ಆಯಿತೆಂದು ಪೊಲೀಸರು ಬಂದರು. ಜೋರು ಧ್ವನಿಯಲ್ಲಿ ಭಾಷಣ ಮಾಡುತ್ತಿದ್ದ ಪ್ರಭುದೇವ ಅವರ ಕೈಯಿಂದ ಮೈಕ್ ಕಸಿದುಕೊಂಡು ಜೀಪಿನಲ್ಲಿ ಕೂರಿಸಿಕೊಂಡು ಅಲ್ಲಿಂದ ಹೋದರು.

ಇಲ್ಲಿ ಭಾಷಣ ಮಾಡ್ತಿದ್ದರಲ್ಲ ಅವರು ಯಾರು? ಪೊಲೀಸರು ಅವರನ್ನು ಎಲ್ಲಿಗೆ ಕರಕೊಂಡು ಹೋದರು? ಎಂದು ಜನ ತಮ್ಮಲ್ಲೇ ಮಾತಾಡಿಕೊಂಡರು. ಅವರಿಗೆ ತಲೆ ಕೆಟ್ಟಿದೆ ಎಂದು ಒಬ್ಬ ಹೇಳಿದ, ಅವರ ತಲೆ ಕೆಟ್ಟಿರಬಹುದು, ಆದರೆ ಅವರು ಹೇಳಿದ್ದರಲ್ಲಿ ನಿಜವಿದೆಯಲ್ಲ ಎಂದು ಮತ್ತೊಬ್ಬ ಮೆಚ್ಚುಗೆ ಸೂಚಿಸಿದ.

* * *

ಗಂಟೆ ಹನ್ನೆರಡಾದರೂ ಗಂಡ ಮನೆಗೆ ಬರಲಿಲ್ಲವೆಂದು ಪ್ರಭುದೇವರ ಹೆಂಡತಿಗೆ ಆತಂಕವಾಯಿತು. ಇನ್ನೇನು ಬರಬಹುದು ಎಂದು ಸಮಾಧಾನ ಮಾಡಿಕೊಳ್ಳುತ್ತಲೇ ಅವರ ದಾರಿ ನೋಡಿದರು. ಮಧ್ಯಾಹ್ನ ಕಳೆಯಿತು. ಸಂಜೆಯೂ ಆಯಿತು. ಗಂಡ ಬರಲೇ ಇಲ್ಲ. ಆ ಸಮಯದಲ್ಲಿ ಮಗ ಜಯದೇವ ಮನೆಯಲ್ಲಿ ಇರಲಿಲ್ಲ. ರಾತ್ರಿ ಹತ್ತೂವರೆ ಹೊತ್ತಿಗೆ ಪ್ರಭುದೇವ ಪೊಲೀಸ್ ಜೀಪಿನಿಂದ ಇಳಿದು ಮನೆಯೊಳಕ್ಕೆ ಬಂದರು.

'ಸಾಹೇಬರ ಸವಾರಿ ಯಾವ ಕಡೆಗೆ ಹೋಗಿತ್ತು? ಬೆಳಿಗ್ಗೆ ಹೋದವರು ಈಗ ಬರ್ತಿದ್ದೀರಲ್ಲ. ನಿಮಗೆ ಮನೆ ಇದೆ, ಹೆಂಡತಿ, ಮಕ್ಕಳಿದ್ದಾರೆ ಅನ್ನೋದು ನೆನಪಾಗಲಿಲ್ಲವೇ?...' ಎಂದು ಹೆಂಡತಿ ಪ್ರಭುದೇವರನ್ನು ದಬಾಯಿಸಿದರು. ಪ್ರಭುದೇವ ಪಿಳಿಪಿಳಿ ಕಣ್ಣು ಬಿಡುತ್ತ ನಿಂತಿದ್ದರೇ ವಿನಾ ಹೆಂಡತಿಗೆ ಉತ್ತರಿಸುವ ಪ್ರಯತ್ನ ಮಾಡಲಿಲ್ಲ. ಕೈಕಾಲು ತೊಳಕೊಂಡು ಬಂದು ಊಟ ಮಾಡಿ ಎಂದು ಹೇಳಿ ಹೆಂಡತಿ ಒಳಕ್ಕೆ ಹೋದರು. ಅಪ್ಪನ ಜತೆಯೇ ಊಟಕ್ಕೆ ಕೂತ ಜಯದೇವ ಏನೂ ಕೇಳಲಿಲ್ಲ. ಬಡಿಸಿದ್ದನ್ನೆಲ್ಲ ತಿಂದು ಕೈತೊಳೆದು ಪ್ರಭುದೇವ ಎದ್ದು ತಮ್ಮ ಕೋಣೆಗೆ ಹೋದರು.

'ಐದಾರು ದಿನಗಳಿಂದ ನೋಡ್ತಾ ಇದ್ದೀನಿ, ನಿಮ್ಮ ನಡವಳಿಕೆ ಸರಿ ಇಲ್ಲ. ನಾನು ಮಾತಾಡ್ತ ಇದ್ರೂ ನೀವು ಸುಮ್ಮನೆ ಇರ್ತೀರಿ! ಏನಾಗಿದೆ ನಿಮಗೆ? ಮೊದಲು ಡಾಕ್ಟರ ಹತ್ರ ಹೋಗಿ ತೋರಿಸಿಕೊಳ್ಳಿ...' ಎಂದು ಹೆಂಡತಿ ಹೇಳಿದ್ದಕ್ಕೂ ಪ್ರಭುದೇವ ಉತ್ತರಿಸಲಿಲ್ಲ. ಎರಡು ದಿನ ಅವರು ಮನೆ ಬಿಟ್ಟು ಹೊರಹೋಗಲಿಲ್ಲ.

ಮೂರನೇ ದಿನ ಬೆಳಿಗ್ಗೆಯೇ ತುಂಬಾ ಹೊತ್ತು ಫೋನಲ್ಲಿ ಮಾತಾಡುತ್ತಿದ್ದರು. ಸಂಜೆ ಹೆಂಡತಿ ಬಳಿ